AA

# 2010

## KANNADA

## (Compulsory)

*Time : 3 Hours ]* *[ Maximum Marks : 150*

### INSTRUCTIONS

(1) *Candidates should attempt* ***all*** *parts and* ***all*** *questions.*

(2) *The number of marks carried by each question is indicated with the question.*

(3) *Answers must be written in Kannada, unless otherwise directed.*

(4) *In the case of Q. No. 3 of Part A, marks will be deducted, if the* ***precis*** *is much longer or shorter than the prescribed length.*

(5) *Q. No. 3 of Part A should be answered in the* ***Precis Sheet*** *provided.*

(6) *Please do* ***not*** *affix your signatures or reveal your identity while answering the questions on letter writing.*

SEAL

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಮೊದಲನೆಯ ಪುಟದಲ್ಲಿ ಮುದ್ರಿಸಲಾಗಿದೆ.

Click Here to get More Latest Karnataka Recruitment Notifications & Previous Papers Information

**11.** ಕೆಳಗಿನ ಪದಗಳಲ್ಲಿ ಕಾಗುಣಿತ ತಪ್ಪಿರುವ ಹತ್ತು ಪದಗಳನ್ನು ಆರಿಸಿ, ಸರಿಪಡಿಸಿರಿ : *10*

(a) ಸದ್ಭಾವನೆ

(b) ಪ್ರಾದೇಷಿಕತೆ

(c) ಮುಕ್ತಾಫಲ

(d) ಧಿಗ್ಗಜ

(e) ಕೃತಗ್ನತೆ

(f) ಅಂಡಾಕಾರ

(g) ಬೆಳದಿಂಗಳು

(h) ಅಣತೆ

(i) ತಾಯಿ ಆಲು

(j) ಸ್ವಾವಲಂಬನ

(k) ರಾಗಾಲಪ

(l) ಧ್ವಜ

(m) ಲಿಂಗಾರ್ಚನೆ

(n) ಹನೇಕಾನೇಕ

(o) ಗಟನಾವಳಿ

(p) ವಿಚಾರಿಸು

(q) ತನುಮನದನ

(r) ಮೃಡ ಕಥಾ ಕಥನ

(s) ಬೀಜ ವೃಕ್ಷ ನ್ಯಾಯ

(t) ಸತ್ಯಾಂಶ

Click Here to get More Latest Karnataka Recruitment Notifications & Previous Papers Information

DRONA



## ಭಾಗ ಸಿ

9. ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ ರೂಪಗಳನ್ನು ಕೊಡಿ : 5

(a) ಕತೆ

(b) ತಾಣ

(c) ಬಿಜ್ಜೆ

(d) ಜನುಮ

(e) ಮುತ್ತು

(f) ಹರಯ

(g) ಹಬ್ಬ

(h) ಆಗಸ

(i) ಸಿಂಗಾರ

(j) ನೇಹ

10. ಕೆಳಗಿನವುಗಳಲ್ಲಿ ಐದಕ್ಕೆ ತದ್ಭವ ರೂಪಗಳನ್ನು ನೀಡಿ : 5

(a) ದ್ಯೂತ

(b) ಶರಣ

(c) ಕುಮಾರ

(d) ಕೋಕಿಲಾ

(e) ಅಮೃತ

(f) ದಾಡಿಂಬ

(g) ಪತಿವ್ರತೆ

(h) ಅಡವಿ

(i) ಗ್ರಹ

(j) ಕಸ್ತೂರಿ

Click Here to get More Latest Karnataka Recruitment Notifications & Previous Papers Information

## ಭಾಗ ಬಿ

5. ಕೆಳಗಿನವುಗಳಲ್ಲಿ ಒಂದನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ : 10

   (a) ಹೊತ್ತುಗೊತ್ತಿಲ್ಲದೆ ಆರಿಸಲಾಗುವ ವಿದ್ಯುತ್ ದೀಪಗಳಿಂದ ಆಗುವ ತೊಂದರೆಗಳು

   (b) ಕಲುಷಿತ ನೀರಿನಿಂದಾಗುವ ಹಲವಾರು ಆಕಸ್ಮಿಕ ಅನಾರೋಗ್ಯ

   (c) ಸಾಮಾನ್ಯ ಜನರ ಮೇಲೆ ಕುರುಡು ನಂಬಿಕೆಗಳನ್ನು ಹೇರುತ್ತಿರುವ ಖಾಸಗೀ ಟಿ.ವಿ. ಪ್ರಸಾರ

6. ಕೆಳಗಿನವುಗಳಲ್ಲಿ ಎರಡರ ಅರ್ಥಸ್ವಾರಸ್ಯವನ್ನು ವಿವರಿಸಿ : 10

   (a) ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು

   (b) ಊರಿಗೆ ಉಪಕಾರಿ ಮನೆಗೆ ಮಾರಿ

   (c) ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ

   (d) ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗುವುದಿಲ್ಲ

7. ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥವನ್ನು ನೀಡಿ, ಅವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : 5

   (a) ರಾಮಬಾಣ

   (b) ಮನೆಗೆ ಮಲ್ಲಿಗೆಯಾಗು

   (c) ಬೇರಿಗೆ ಬಿಸಿನೀರು

   (d) ಕಣ್ಣು ತೆರೆದು ನೋಡು

   (e) ಟೊಂಕ ಕಟ್ಟಿ ನಿಲ್ಲು

8. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : 5

   (a) ಹೊಸಗನ್ನಡದ ಅಕ್ಷರ ಮಾಲೆಯಲ್ಲಿರುವ ಯೋಗವಾಹಗಳೆಷ್ಟು ?

   (b) ಬಾಹುಬಲಿಯನ್ನು ಕೆತ್ತಿಸಿ ಶ್ರವಣ ಬೆಳಗೊಳದಲ್ಲಿ ನಿಲ್ಲಿಸಿದವನು ಯಾರು ?

   (c) "ಕುರಿಗಳು ಸಾರ್ ಕುರಿಗಳು" ಯಾರ ಕವನ ?

   (d) ಕಂದ, ತ್ರಿಪದಿ – ಇವುಗಳಲ್ಲಿ ದೇಸಿ ಛಂದಸ್ಸು ಯಾವುದು ?

   (e) ಕನ್ನಡದ ಪ್ರಥಮ ರಾಷ್ಟ್ರಕವಿ ಪ್ರಶಸ್ತಿ ಪಡೆದ ಕವಿ ಯಾರು ?

4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ : 25

Children should learn to be honest and open-hearted to their parents. A hypocritical child is one of the most harmful things in the world. You should have no secrets which you are unwilling to disclose to your parents. If you have done wrong you should openly confess it and ask that forgiveness which a parent's heart is ready to bestow. If you wish to undertake anything ask the consent of your parents. If once you strive to deceive your parents you will be lead on to invent falsehoods till you become contemptible and hateful. You will soon be detected and then none will trust you. Sincerity in a child will make up for many faults. Of children he is the worst who watches the eye of his parents, pretends to obey as long as they see him, but, as soon as they have turned away, does what they have forbidden.

ತೈಲಚಿತ್ರಗಳು, ಬಂದ ಪ್ರಶಸ್ತಿಗಳು ಮನೆಯನ್ನೆಲ್ಲ ಒಪ್ಪವಾಗಿ ಆವರಿಸಿಕೊಂಡಿವೆ. ನೋಡುತ್ತ ಹೋದಂತೆ ಕುವೆಂಪು ಕವನಗಳು ಕರ್ಣಮಧುರವಾಗಿ ಕೇಳಸುವಂತಹ ವ್ಯವಸ್ಥೆಯೂ ಇದೆ. ಅಪರೂಪದ ಭಾವಚಿತ್ರಗಳ ಗ್ಯಾಲರಿ ನೋಡಿ, ಆನಂದಿಸಿ ಹೊರಬಂದರೆ ತಣಿಸಲು ಉಪಹಾರ ಗೃಹವಿದೆ. ಕೂಗಳತೆಯಲ್ಲಿ ಶ್ರೀಕವಿಯಿಂದ ಹೆಸರಿಸಲ್ಪಟ್ಟ ಕವಿಶೈಲ, ಬೆಟ್ಟದ ದಾರಿಯುದ್ದಕ್ಕೂ ಬೃಹತ್ ಶಿಲಾದ್ವಾರಗಳು, ಕಲ್ಲಕಮಾನುಗಳು ಕಿವಿಗೊಟ್ಟರೆ, ಮಲೆಯ ನಾಡೆನಗೆ ತಾಯಿಮನೆ/ಕಾಡುದೇವರ ಬೀಡು/ಗಿರಿಯ ಮುಡಿ ಶಿವನ ಗುಡಿ/ಬನವೆಣ್ಣೆ ಮೊದಲಿನಾ ಮನದನ್ನೆ ಎಂದು ಕುವೆಂಪು ಪಿಸುಗುಟ್ಟಿದಂತಾಗುತ್ತದೆ. ಯಾಕೆಂದರೆ ಇಲ್ಲಿ ಮೌನದ್ದೇ ರಾಜ್ಯಭಾರ. ಅನತಿದೂರದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದವರ ವಿಸ್ತರಣಾ ಕೊಂಡಿ 'ಕುವೆಂಪು ಕನ್ನಡ ಅಧ್ಯಯನ ಕೇಂದ್ರ.' ಪಕ್ಕದಲ್ಲಿಯೇ ಸುಂದರ ಸಭಾಗೃಹ, ಎಂ.ಫಿಲ್., ಪಿಎಚ್.ಡಿ. ಮಾಡುವವರಿಗೆ, ಸಂಶೋಧಕರಿಗೆ ತೆರೆದ ಬಾಗಿಲು. 'ಕುವೆಂಪು ಕನ್ನಡ ತಂತ್ರಾಂಶ ಅಭಿವೃದ್ಧಿ ಕೇಂದ್ರ' ತೇಜಸ್ವಿಯವರ ಕನಸಿನ ಕೂಸು. ಅವರ ಹಾಗೂ ಕಂಬಾರ, ವಿವೇಕ ರೈ, ಚಿದಾನಂದಗೌಡರಂತ ವಿಚಾರಶೀಲರ ಮೂಷೆಯಲ್ಲಿ ಪುಟವಿಕ್ಕಿದಂತೆ ಕನ್ನಡ ನುಡಿಯನ್ನು ಅತ್ಯಾಧುನಿಕ ಅಗತ್ಯಗಳಿಗೆ ಸಜ್ಜುಗೊಳಿಸುವಲ್ಲಿ ಕಾರ್ಯ ಮಾಡುತ್ತಿದೆ. ಒಟ್ಟಿನಲ್ಲಿ ಶ್ರೀ ಕುವೆಂಪುವಿನ ಸಮಗ್ರ ದರ್ಶನಕ್ಕೆ ಸೂಕ್ತವಿದೆ, ಸ್ಮಾರಕವೆಂದರೆ ಹೀಗಿರಬೇಕೆಂಬಂತಿದೆ.

ಕುಪ್ಪಳ್ಳಿಯ ಸ್ಮಾರಕ್ಕಿರುವ ವಿಸ್ತಾರ, ನಿತ್ಯಹರಿದ್ವರ್ಣದ ಭಾಗ್ಯ ಬೇರಾವುದಕ್ಕೂ ಇಲ್ಲದಾಗಿದೆ. ಗೀತಗಾರುಡಿಗ ಬೇಂದ್ರೆ ನೆನಪಿನ ಸಾಧನಕೇರಿಯಲ್ಲಿನ ಎರಡಂತಸ್ತಿನ ಕಟ್ಟಡದಲ್ಲಿ ಒಂದು ಸಭಾಂಗಣ, ಗ್ರಂಥಾಲಯ, ಬೇಂದ್ರೆ ವಿವಿಧ ಭಂಗಿಯ ಚಿತ್ರಗಳು, ಮಾಳಿಗೆ ಮೇಲೆ ಬಯಲು ಮಂಟಪ ಇವೆ. ಬೇಂದ್ರೆ ರಾಷ್ಟ್ರೀಯ ಟ್ರಸ್ಟಿನ ಅಧ್ಯಕ್ಷ ಡಾ. ಕಲಬುರ್ಗಿಯವರ ಕಳೆದೆರಡು ವರ್ಷಗಳ ಪ್ರಯತ್ನದಿಂದಾಗಿ, ಈ ಕಟ್ಟಡದ ಎದುರಿನ ಕೆರೆಯ ಸುತ್ತಮುತ್ತಲಿನ ಜಾಗೆಯಲ್ಲಿ ಸುಂದರ ತೋಟ, ಭವ್ಯ ಬೇಂದ್ರೆ ಭವನ, ಪುತ್ಥಳಿ ಇತ್ಯಾದಿಗಳು ಬಾರೊ ಸಾಧನಕೇರಿಗೆ ಯೋಜನೆ ಬೇಗನೆ ಬರಲಿದೆ. ಕಲಬುರ್ಗಿಯವರ ಜೊತೆ ಟ್ರಸ್ಟಿಗಳಾಗಿ ವಾಮನ ಬೇಂದ್ರೆ, ಬಿದರಕುಂದಿ, ವೀಣಾ ಶಾಂತೇಶ್ವರ, ಗಿರಡ್ಡಿ, ಬಾಳಣ್ಣ, ಶರ್ಮಾ ಮುಂತಾದವರಿದ್ದಾರೆ. ಒಟ್ಟಿನಲ್ಲಿ ಬೇಂದ್ರೆ ಅಧ್ಯಯನದವರಿಗೆ ಇದೊಂದು ಅಕರ ಆಲಯ. ಇದಲ್ಲದೆ ಧಾರವಾಡದಲ್ಲಿ ಗಂಗೂಬಾಯಿ ಹಾನಗಲ್ ಸ್ಮಾರಕವಿದೆ. ಓಣಿಯಲ್ಲಿದ್ದ ಪೂರ್ವಜರ ಮನೆಯನ್ನು ಜೀರ್ಣೋದ್ಧಾರ ಮಾಡಲಾಗಿದೆ. ಗಂಗಮ್ಮನ ಬಾಲ್ಯದಿಂದ ಇಂದಿನವರೆಗಿನ ಅತ್ಯದ್ಭುತ ಎನಿಸುವ ಚಿತ್ರಪಟಗಳು ಕಂಗೊಳಿಸುತ್ತವೆ. ಈ ಹಿರಿಜೀವ ಎಷ್ಟೊಂದು ಸ್ವರದ್ರೂಪಿಯಾಗಿದ್ದರು ಎಂಬುದನ್ನು ನೋಡುವುದೇ ಒಂದು ರೋಮಾಂಚನ, ನಿರಂತರವಾಗಿ ಕಿವಿಗಪ್ಪಳಿಸುವ ಗಾನಕೋಗಿಲೆಯ ಅತಿಮಧುರ ಹಿಂದೂಸ್ತಾನಿ ಗಾಯನ ಝೇಂಕಾರ ಇನ್ನೂ ಹೆಚ್ಚಿನ ಭಾವಾನಂದ. ಮನೆಯನ್ನು ಸಜ್ಜುಗೊಳಿಸಿದ ಜಿಲ್ಲಾಧಿಕಾರಿ ಶ್ರೀಕರ್‌ರನ್ನು ಅಭಿನಂದಿಸಬೇಕು. ಇಲ್ಲಿಂದ ಹಳೆಯ ಕಲೆಕ್ಟರ್ ಕಾಂಪೌಂಡ್ (ಜಿಲ್ಲಾಧಿಕಾರಿ) ಆವರಣಕ್ಕೆ ಬಂದರೆ ಸಿಗುತ್ತವೆ. ಇನ್ನೂ ಎರಡು – ಬಸವರಾಜ ರಾಜಗುರು ರಂಗಮಂದಿರ ಹಾಗೂ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್ ಸ್ಮಾರಕಗಳು.

[Turn over

**3.** ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 100 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. 25

ವಿ.ಸೂ. : *ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.*

ಕರ್ನಾಟಕವು ಪ್ರೇಕ್ಷಣೀಯ ಸ್ಥಳಗಳ ಸಮೃದ್ಧ ಕಣಜ. ವಿಶ್ವ ಪರಂಪರೆಯ ಪಟ್ಟಿಯಲ್ಲಿ ಹಂಪಿ, ಪಟ್ಟದಕಲ್ಲು ಸ್ಥಾನಗಳಿಸಿಕೊಂಡಿದ್ದರೆ ಇಷ್ಟೇ ಅರ್ಹತೆಯ ಇನ್ನೂ ಹಲವಾರು ಸ್ಮಾರಕಗಳು ನಮ್ಮಲ್ಲಿವೆ. ಜಗತ್ತಿನ ಎಲ್ಲ ಮಾರ್ಗಗಳೂ ಹೋಗಿ ಕೂಡುವ ಕೇಂದ್ರವೆಂಬ ಹೆಗ್ಗಳಿಕೆಯ ಅಮೇರಿಕಾದಲ್ಲೂ ಇಂತಹ ಐತಿಹಾಸಿಕ ಪುರಾವೆಗಳು ಇಲ್ಲವೆನ್ನುವದು ನಮ್ಮ ಪರಂಪರೆಯ ಬಗ್ಗೆ ಹೆಚ್ಚೆಚ್ಚು ಕೊಚ್ಚಿಕೊಳ್ಳುವಂತೆ ಮಾಡುತ್ತದೆ.

ರಾಜನೊಬ್ಬನ ಪ್ರತಿಷ್ಠೆ, ಸಾಮ್ರಾಜ್ಯ ವಿಸ್ತರಣೆ, ಪ್ರೀತಿ, ದೈವಭಕ್ತಿ ಇತ್ಯಾದಿಗಳ ಕುರುಹಾಗಿ ಬೃಹತ್ ಸ್ಮಾರಕಗಳು ಎದ್ದು ನಿಲ್ಲುತ್ತವೆ. ತ್ಯಾಗದ ಪ್ರತೀಕವಾಗಿ ಮಾಸ್ತಿಕಲ್ಲುಗಳು, ಗೊಮ್ಮಟೇಶ್ವರ; ಪ್ರೇಮದ ದ್ಯೋತಕವಾಗಿ ಗೋಳಗುಮ್ಮಟ, ನಿರಂಜನಿ ಮಹಲ್‌ಗಳು ಕಂಗೊಳಿಸುತ್ತಿವೆ. ಒಟ್ಟಿನಲ್ಲಿ ಹಿಂದಿನ ನೆನಪನ್ನು ಶಾಶ್ವತವಾಗಿಡುವ ಕೃತಜ್ಞತಾ ರೂಪಕಗಳು ಇವೆಲ್ಲ. 'ಹಿಂದಣ ಹೆಜ್ಜೆಯ ನೋಡಿಕಂಡಲ್ಲದೆ ಮುಂದಣ ಹೆಜ್ಜೆಯನರಿಯಲಾಗದು' ಎಂಬ ಅಲ್ಲಮನ ಉಕ್ತಿಯಂತೆ.

ಇಂತಹ ಪ್ರಾಚೀನ ನಿರ್ಮಾಣಗಳ ಸಾಲಿನಲ್ಲಿಯೇ ಇಂದು ಹಲವಾರು ಹೊಸ ಸ್ಮಾರಕಗಳೂ ತಲೆಯೆತ್ತಿವೆ. ಒಂದು ನಿನ್ನೆ, ಇನ್ನೊಂದು ಇಂದು; ಇಂದು ನಾಳೆಗೆ ನಿನ್ನೆಯಾಗುವ ಪರಿಯೇ ಚರಿತ್ರೆ. ಪ್ರತಿಕ್ಷಣವೂ ಜಾರುತ್ತಲೇ ಇತಿಹಾಸವಾಗುತ್ತದೆ. ಭೂತ, ವರ್ತಮಾನ, ಭವಿಷ್ಯಗಳ ನಿರಂತರ ನಿರ್ಮಾಣ ಮತ್ತು ಸರಿಯುವಿಕೆ ಸೃಷ್ಟಿಯ ಅದ್ಭುತ ನಿಯಮ. ಇವುಗಳ ದಾಖಲೆ, ಸಾಕ್ಷಿಪ್ರಜ್ಞೆ ಮಾನವನದು.

ಹೊಸ ಸ್ಮಾರಕಗಳ ಸಾಲಿನಲ್ಲಿ ಇತ್ತೀಚೆಗೆ ನಾನು ನೋಡಿಬಂದ ಕುಪ್ಪಳ್ಳಿ ಮನೆ, ಕವಿಶೈಲ, ಮಂಜೇಶ್ವರ, ಧಾರವಾಡ, ಹಾವೇರಿ, ಕಾಗಿನೆಲೆ, ಬಾಡಗಳ ಬಗ್ಗೆ ಹೇಳಬೇಕೆನಿಸಿದೆ, ರಾಷ್ಟ್ರಕವಿ ಕುವೆಂಪು ನೆಲೆಸಿದ ಮನೆ ಇಂದು ಸುಂದರ ತಾಣ. ಇನ್ನೂರು ವರ್ಷಗಳಷ್ಟು ಹಳೆಯದಾದ ಶಿಥಿಲಾವಸ್ಥೆಯಲ್ಲಿದ್ದ ಇದನ್ನು, ಪುನರ್ ನಿರ್ಮಾಣ ಮಾಡಲಾಗಿದೆ. 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ'ದ ಪರಿಶ್ರಮ, ಸರಕಾರದ ಸಹಾಯ, ಇದೊಂದು 'ಮಾದರಿ ಸ್ಮಾರಕ'ವಾಗುವಲ್ಲಿ ಸಾಫಲ್ಯ ಕಂಡಿದೆ. ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್ ನೇತೃತ್ವದ ಹಂಪನಾ ದಂಪತಿ, ದೇಜಗೌ, ಕಾಗೋಡು, ಡಿ.ಬಿ. ಚಂದ್ರೇಗೌಡರಂತಹ ಶ್ರೇಷ್ಠ ಚಿಂತಕರ ಪ್ರತಿಷ್ಠಾನದ ಕಾರ್ಯ ಮೆಚ್ಚುವಂತಹದು. ಮನೆಯ ಸುತ್ತಲೂ ಸುಂದರ ತೋಟ, ಕುವೆಂಪು ಸಂದೇಶದ ಶಿಲಾಫಲಕಗಳು, ವರಕವಿ ಬೇಂದ್ರೆಯವರ 'ಯುಗದ ಕವಿಗೆ, ಜಗದ ಕವಿಗೆ, ಶ್ರೀರಾಮಾಯಣದ ಕವಿಗೆ ನಮನ' ಎಂಬ ಸಾಲುಗಳು ಒಳ ಬರುವವರಿಗೆ ಆತ್ಮೀಯ ಸ್ವಾಗತ ಕೋರುತ್ತವೆ. ಈ ಮನೆ ಈಗೊಂದು ಮ್ಯೂಜಿಯಂ. ಕುವೆಂಪು ಬಳಸಿದ ಅನೇಕ ವಸ್ತುಗಳು, ಹಸ್ತಪ್ರತಿಗಳು, ಪಾಕಶಾಲೆ, ಕೃಷಿ ಪರಿಕರಗಳು, ಭತ್ತದ ಕಣಜಗಳು, ಅವರ ಗ್ರಂಥಗಳು, ಸುಂದರವಾದ

ಮಿಲ್ಲುದಾರದ ಹಾರ. ಹಿಂದೆ ಗೃಹಸ್ಥನು ತೋಟದಿಂದ ಬಿಡಿಸಿಕೊಂಡು ಬಂದ ಹೂ, ಮನೆಯಾಕೆ ಕಟ್ಟಿದ ಮಾಲೆ; ಈಗ ಅಂಗಡಿಯಿಂದ ಬಂದ ಹುವ್ವು ಸೊಪ್ಪುಗಳ ಕಂತೆ. ಹಿಂದೆ ಮನೆಯ ಜನ ಕುಳಿತು ಹಚ್ಚಿದ ಊಟದೆಲೆ, ಈ ಹೊತ್ತು ಯಂತ್ರನಿರ್ಮಿತವಾದ ಲೋಹದ ತಟ್ಟೆ. ಪೂರ್ವಿಕರಲ್ಲಿ ತಮ್ಮ ಬಟ್ಟೆಯನ್ನು ತಮ್ಮ ಕೈಯಿಂದ ತಾವೇ ಒಗೆದು ಕೊಳ್ಳಬೇಕು, ತಮ್ಮ ಅಡಿಗೆಯನ್ನು ತಾವೇಮಾಡಿಕೊಳ್ಳಬೇಕು ಎಂಬ ನಿಯಮ ಸಾಮಾನ್ಯವಾಗಿತ್ತು. ಕೂಲಿಕೊಟ್ಟು ದೇವರ ಪೂಜೆಮಾಡಿ ತಾನು ಕುಳಿತ ಕಡೆಗೆ ತೀರ್ಥ ಪ್ರಸಾದಗಳನ್ನು ತರಿಸಿಕೊಳ್ಳುವುದಕ್ಕಿಂತ, ತಾವೇ ಮೈಬಗ್ಗಿಸಿ ಮಾಡಿದ ನಮಸ್ಕಾರದಲ್ಲಿ ನಮ್ರತೆ ಹೆಚ್ಚು ಎಂಬುದು ಹಿಂದಿನ ಭಾವನೆ. ತಂದೆ ಕಾಯಿಲೆ ಬಿದ್ದರೆ ತಾನೇ ಹತ್ತಿರವಿದ್ದು ಉಪಚರಿಸುವುದು ಹಿಂದಿನ ಸಂಪ್ರದಾಯ. ಕೂಲಿಯ ನರ್ಸುಗಳನ್ನು ನಿಯಮಿಸುವುದು ಇಂದಿನ ಪಿತೃ ಭಕ್ತಿ. ಮಗುವಿನ ಹೊಟ್ಟೆಗೆ ಹೇಗೋ ಹಾಲು ಸೇರಿದ್ದು ಇಂದಿನ ಮುಖ್ಯ ಗುರಿ. ಪೂರ್ವಿಕರು ದೇವರ ಪ್ರೀತಿಗೆಂದು – ಜನ್ಮ ಸಾರ್ಥಕವಾಗಲೆಂದು – ಯಾವುದಾದರೊಂದು ದೊಡ್ಡ ಸಂಕಲ್ಪವನ್ನು ಮನಸ್ಸಿನಲ್ಲಿರಿಸಿಕೊಂಡು, ಅದು ಕೂಡಿಬರುವ ಕಾಲದ ನಿರೀಕ್ಷಣೆಯಲ್ಲಿ ಬಾಳ್ವೆ ನಡೆಸುತ್ತಿದ್ದರು. ಒಂದು ತೀರ್ಥಯಾತ್ರೆ, ಒಂದು ದೇವರ ಸೇವೆ, ಒಂದು ವ್ರತ, ಒಂದು ಸತ್ರ ಸ್ಥಾಪನೆ, ಒಂದು ರಾಮೋತ್ಸವ, ಒಂದು ದಾನ, ಒಂದು ಅನ್ನ ಸಂತರ್ಪಣೆ, ಒಂದು ಪುರಾಣ ಶ್ರವಣ – ಇಂಥ ಯಾವುದೋ ಒಂದು ದೊಡ್ಡ ಉದ್ದೇಶಕ್ಕಾಗಿ ಸದ್ಯದ ಭೋಗ ಲಾಭಗಳಿಗೆ ಸಂಬಂಧಪಡದ ಸಂಕಲ್ಪಕ್ಕಾಗಿ ಅವರು ಯಾವಜ್ಜೀವವೂ ಹಂಬಲಿಸಿ ಹಣವುಳಿಸಿ ಅದು ನೆರವೇರಿದಾಗ ತಾವು ಬದುಕಿದ್ದು ಸಾರ್ಥಕವಾಯಿತೆಂದು ನಲಿಯುತ್ತಿದ್ದರು. ಅಂಥ ಪಾರಮಾರ್ಥಿಕತೆ ಈಗ ವಿರಳವಾಗುತ್ತಿದೆ. ಗಾಂಧಿಯವರು ಬದುಕಿದ್ದಾಗ ಹಲಮಂದಿ ಒಂದೆರಡು ಸಾರಿ ಅಂಥ ಪಾರಮಾರ್ಥಿಕತೆಯನ್ನು ತೋರಿದ್ದು ನಿಜ. ಆದರೆ ನಮ್ಮ ಅನುದಿನದ ಸಾಮಾನ್ಯ ಜೀವನದಲ್ಲಿ ಆ ಗುಣ ತೋರಿಬರುವುದು ಈಗ ತೀರಾ ಕಡಿಮೆಯಾಗಿದೆ. ಹಳೆಯ ಭಕ್ತಿ ಶ್ರದ್ಧೆಗಳು ಹೋಗಿವೆ; ಹೊಸ ಆತ್ಮೋದ್ಧಾರದ ಭಾವನೆ ಯಾವುದೂ ಬಂದಿಲ್ಲ. ಈ ಘಳಿಗೆ ತಿಂದ ತಿಂಡಿ, ಈ ಘಳಿಗೆ ನೋಡಿದ ನೋಟ ಅದಿಷ್ಟೇ ಇಂದಿನವರ ಬಾಳು.

*ಪ್ರಶ್ನೆಗಳು :*

(ಅ) ಹಿಂದಿನ ಕಾಲದ ನಮ್ಮ ಮನೆಮನೆಯ ಸಂಸ್ಕೃತಿ ಇದ್ದದ್ದು ಹೇಗೆ ?

(ಆ) ಸಮಾಜದ ವೃತ್ತಿಜೀವನದ ಬಗ್ಗೆ ಇದ್ದ ಹೆಮ್ಮೆ ಎಂಥಹುದು ?

(ಇ) ಅಂದಿನ ಕುಟುಂಬ ಜೀವನದ ಪರಿ ಹೇಗಿತ್ತು ?

(ಈ) ಸಮಾಜದ ವ್ಯವಸ್ಥೆಯಲ್ಲಿ ಆಧುನಿಕತೆ ಬೆಳೆದು ಬಂದ ಬಗೆ ಹೇಗೆ ?

(ಉ) ಇಂದಿನ ಬದುಕು, ಗುರಿ ಇಲ್ಲದ ಬದುಕು, ಹೇಗೆ ?

ಸಂಯುಕ್ತ ಸಂಸಾರಗಳು ಒಬ್ಬ ಯಜಮಾನನ ಆಳಿಕೆಯಲ್ಲಿ ಬದುಕುತ್ತಿದ್ದವು. ಆಗ ಕಷ್ಟಗಳಿರಲಿಲ್ಲವೆಂದಲ್ಲ. ಈಗ ಅದೇನೂ ತಪ್ಪಿಲ್ಲ. ಆದರೆ ಈಗಣ ಕಷ್ಟದ ರೀತಿ ಬೇರೆ, ಆಗಣದರ ರೀತಿ ಬೇರೆ. ತಂಟೆ ತಕರಾರುಗಳ ಬೇರುಗಳು ಮನುಷ್ಯ ಸ್ವಭಾವದಲ್ಲಿ ಯಾವಾಗಲೂ ಇದ್ದೇ ಇರುತ್ತವೆ. ಒಟ್ಟು ಕುಟುಂಬದಲ್ಲಿ ಅವುಗಳನ್ನು ಸರಿಪಡಿಸುವ ಕ್ರಮವೂ ಒಂದಿತ್ತು. ಒಟ್ಟಿನಲ್ಲಿ ಅದು ಐಕ್ಯಮತ ಸಾಧನೆಯ ಕ್ರಮ. ಆದು ಒಂದು ತೆರದ ಡೆಮಾಕ್ರಸಿ, ಜನರಾಜ್ಯ, ಒಟ್ಟು ಬದುಕು. ಈಗ ಆ ಸಂಸ್ಕೃಷ್ಟಿ ಭಾವನೆ ಕರಗಿ ಹೋಗಿ ಪ್ರತ್ಯೇಕತಾ ಭಾವನೆ ಬಲ ಪಡುತ್ತಿದೆ. ಅವನವನ ಪಾಡು ಅವನವನದು. ಗಟ್ಟಿಗ ಅಟ್ಟಕ್ಕೆ, ಹಿಂದಾದವ ಹಳ್ಳಕ್ಕೆ. ಹೀಗೆ ಒಂದಾಗಿದ್ದ ಮನೆ ಎರಡಾಗಿ, ನಾಲ್ಕಾಗಿ ಒಡೆಯುತ್ತಿದೆ. ಒಂದು ಕುಟುಂಬದಲ್ಲಿಯೇ ದ್ವಿಮುಖ ಸರಕಾರ. ಈಚೀಚೆಗೆ ಬರುತ್ತಿರುವ ಮದುವೆಯ ಆಹ್ವಾನಪತ್ರಿಕೆಗಳಲ್ಲಿ ಇದು ಚೆನ್ನಾಗಿ ಕಾಣಬರುತ್ತದೆ. ಇಷ್ಟ ಆಶೀರ್ವದಿಸಿ ತೆರಳಿದರು. ಈಗ ಗಂಡನ ಆಹ್ವಾನವೇ ಬೇರೆ, ಹೆಂಡತಿಯದೇ ಬೇರೆ. ಈ ಹೊಸ ಮರ್ಯಾದೆ ಯೂರೋಪಿಯನ್ನರ ಅನುಕರಣ. ಆದರಲ್ಲಿ ಗಂಡ ಹೆಂಡಿರ ಏಕೀಭಾವದ ಸೂಚನೆಯಿಲ್ಲ. ಭಿನ್ನ ವ್ಯಕ್ತಿತ್ವದ ಸೂಚನೆಯುಂಟು. ಆದು ಸ್ತ್ರೀ ಪುರುಷರ ಸಮಾನತ್ವವಂತೆ. ಹಾಗಾದರೆ ಗಂಡನ ಕುಲ ಗೋತ್ರಗಳನ್ನು ಹೆಂಡತಿಯೇಕೆ ಸ್ವೀಕರಿಸಬೇಕು ? ಅವನ ಹೆಸರಿನಲ್ಲಿ ಆಕೆಯೇಕೆ ಅಡಗಿ ಕೊಳ್ಳಬೇಕು. ಶ್ರೀಮತಿ ಮತ್ತು ಶ್ರೀ ರಾಮಣ್ಣ (Mrs. and Mr. Ramanna) ಎಂಬುದಕ್ಕೆ ಬದಲಾಗಿ ಶ್ರೀಮತಿ ಮತ್ತು ಶ್ರೀ ಸೀತಮ್ಮ (Mrs. and Mr. Sithamma) ಎಂದೇ ಇಬ್ಬರೂ ಕರೆದುಕೊಳ್ಳಬಹುದಲ್ಲ ! ದಂಪತಿ ಎಂಬುದು ಒಂದು – ಗಂಡನಲ್ಲಿ ಹೆಂಡತಿ ಒಂದಾಗಿದ್ದಾಳೆ – ಎಂಬುದು ಹಿಂದಿನ ಭಾವನೆ.

ಒಳ್ಳೆಯ ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿ ಸಂಯಮ, ವ್ಯಕ್ತಿವಿಕಾಸ – ಈ ಎರಡು ಬಗೆಯ ಸಂಸ್ಕಾರಗಳಿಗೂ ಅವಕಾಶವಿರುತ್ತದೆ. ದಂಪತಿಗಳ ಜೀವನದಲ್ಲಿ ಗಂಡನು ದ್ರವ್ಯಾರ್ಜನೆಯ ವ್ಯವಹಾರದಲ್ಲಿ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ. ಹೆಂಡತಿ ಪಾಕ ಪರಿಟವಣೆಗಳಲ್ಲಿ, ಒಪ್ಪ ಓರಣಗಳಲ್ಲಿ ತನ್ನ ವ್ಯಕ್ತಿತ್ವವನ್ನು ಬೆಳಗುತ್ತಾಳೆ. ಮಕ್ಕಳ ಲಾಲನೆ ಪಾಲನೆಗಳಲ್ಲಿಯೂ ಬಂಧುಗಳ ಉಪಚಾರದಲ್ಲಿಯೂ ಇಬ್ಬರೂ ತಮ್ಮ ತಮ್ಮ ಪ್ರತ್ಯೇಕ ವ್ಯಕ್ತಿತ್ವನ್ನು ವಿಲೀನವಾಗಿಸಿ ಏಕೀಭವಿಸುತ್ತಾರೆ. ಹೀಗೆ ಸಂಸ್ಕೃಷ್ಟಿಯ ಶಿಕ್ಷಣದ ಜೊತೆಗೆ ವೈಶಿಷ್ಟ್ಯದ ಶಿಕ್ಷಣ ಸೇರಿಕೊಂಡಿರಬೇಕು. ಎಲ್ಲ ದೈವಭಕ್ತರಿಗೂ ಗುಡಿ ಒಂದು, ನಮಸ್ಕಾರಗಳು ಒಬ್ಬೊಬ್ಬರದೂ ಬೇರೆ ಬೇರೆ. ಈ ಪ್ರತ್ಯೇಕ ಧರ್ಮಾಭ್ಯಾಸಕ್ಕೆ ಹಿಂದೆ ಇದ್ದಷ್ಟು ಅವಕಾಶ ಈಗ ಇಲ್ಲ. ಈಗಣ ಸಂದರ್ಭ ಸರ್ವ ಸಾಂಕರ್ಯದ್ದು. "ಸಬ್ ಏಕ್ ಲುಂಡ." ಇದು ಇಂದಿನ ರೀತಿ. ಹಿಂದೆ ಸಂಖ್ಯಾಬಲದ ಅತಿರೇಕವಿರಲಿಲ್ಲ. ಈಚೀಚಿನ ರಾಜಕೀಯದಿಂದ ಬಂದಿರುವ ಈ ದೊಂಬಿಯ ದರ್ಬಾರಿನ ಜೊತೆಗೆ ಯಂತ್ರದಿಂದಾಗುವ ದೊಂಬಿ ಸೇವೆ ಸೇರಿಕೊಂಡಿದೆ. ಹಿಂದೆ ಊಟ ಮಾಡುವವರ ರುಚಿಯನ್ನು ನೋಡಿ ಅಡಿಗೆ, ಈ ಹೊತ್ತು ಹೋಟೆಲಿನ ಅಡಿಗೆ. ಹಿಂದೆ ನಾಲಿಗೆ ಬೇಕೆಂದಂತೆ ಭಕ್ಷ್ಯ, ಈ ದಿನ ಕಾರ್ಖಾನೆಯ ವ್ಯಾಪಾರ ದೃಷ್ಟಿಯಿಂದ ಆದ ಹುರಿಗಾಳು ಬಿಸ್ಕತ್ತುಗಳು. ಹಿಂದೆ ಪುರೋಹಿತರು ಸ್ವಂತ ತಕಲಿಯಿಂದ ನೂಲು ತೆಗೆದು ಮಾಡಿದ ಜನಿವಾರ, ಈಗ

ತಿಂಡಿ ಹೆಚ್ಚು ರುಚಿಯಿರಬಹುದು. ಆದರೆ ಮನೆಯ ಜನರ ಪ್ರೀತಿ ವಿಶ್ವಾಸ ಆದರಲ್ಲಿರುತ್ತದೆಯೆ ? ಹಿಂದೆ ಮನೆಯಲ್ಲಿ ಒಬ್ಬ ಬಸುರಿ ಹೆಂಗಸಿದ್ದಾಗ ಆಕೆಗೆಂದು, ಕೈಯಿಂದ ಚಕ್ಕುಲಿ ಸುತ್ತಿ ಕರಿಯುತಿದ್ದರು. ಈಗ ಅಂತ ತಿರುಮಣಿಯ ಚಕ್ಕುಲಿ ಕಣ್ಣಿಗೆ ಕಾಣಿಸುವುದೇ ಅಪರೂಪವಾಗಿದೆ. ಅಗ ಬೆರಳು ಮಾಡುತಿದ್ದ ಕೆಲಸವನ್ನು ಈಗ ಒರಳು ಮಾಡುತ್ತದೆ. ಬೆರಳಿನ ಹಿಂದೆ ಕರುಳಿರುತ್ತಿತ್ತು. ಕರುಳಿಗೂ ಒರಳಿಗೂ ಅಷ್ಟು ಹತ್ತಿರದ ಸಂಬಂಧವಿಲ್ಲ. ಆಗ ಮದುವಣಿಗರು ಹಸೆಯ ಮೇಲೆ ಕುಳಿತರೆ ಹೆಣ್ಣುಮಕ್ಕಳು ಕೊರಳ ಒಂಬದಿಂದಲೂ ಮದುಕಿಯರು ಮಮತೆಯ ಉತ್ಸಾಹದಿಂದಲೂ ಹಾಡು ಹೇಳುತ್ತಿದ್ದರು. ಈಗ ಗ್ರಾಮಫೋನ್ ಸಂಗೀತ. ಆಗ ಗಂಧ ತೇಯ್ದು ಕೇಸರಿ ಪಚ್ಚೆ ಕರ್ಪೂರ ಬೆರಸಿದ ಪರಿಮಳ, ಈಗ ಸೆಂಟ್ – ವಿದೇಶಿಯದು. ಸ್ವಾಭಾವಿಕದ ಸ್ಥಾನಕ್ಕೆ ಕೃತಕ ಬರುತ್ತಿದೆ.

ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಜನರಲ್ಲಿ ಕೆಲಸಗಾರತನದ ಹೆಮ್ಮೆ ಕಳೆದು ಹೋಗಿದೆ. ಹಿಂದೆ, ಪ್ರತಿಯೊಬ್ಬರಿಗೂ ತಮ್ಮ ತಮ್ಮ ದಿನದಿನದ ಕೆಲಸದ ವಿಷಯದಲ್ಲಿ ಗೌರವವಿರುತ್ತಿತ್ತು – ಗಂಡಸಿಗೆ ತನ್ನ ಕಸಬಿನ ವಿಷಯದಲ್ಲಿ. ಹೆಂಗಸಿಗೆ ತನ್ನ ಅಡಿಗೆ ಗೃಹಕೃತ್ಯದಲ್ಲಿ. ರೈತ ತನ್ನ ನೇಗಿಲು ದನ ಉಳುಮೆಗಳನ್ನು ಕುರಿತು ಜಂಬ ಇಟ್ಟುಕೊಂಡಿದ್ದ. ಬಡಗಿಯೂ ಗಾರೆಕಾರನೂ ತಮ್ಮ ಕೈಚಳಕಕ್ಕಾಗಿ ಹೆಮ್ಮೆ ಪಡುತ್ತಿದ್ದರು. ಕರಣಿಕನು ತನ್ನ ಅಕ್ಷರದ ಸೊಗಸಿಗಾಗಿ, ಪುರೋಹಿತನು ಮಂತ್ರೋಚ್ಚಾರಣೆಗಾಗಿ, ಉಪಾಧ್ಯಾಯನು ತನ್ನ ಪಾಠಶೀಲತೆಗಾಗಿ, ಕುಂಬಾರನು ತನ್ನ ಕೈಯ ನವುರಿಗಾಗಿ ಹಿಗ್ಗುತ್ತಿದ್ದ. ಕೆಲಸ ಕೂಲಿಗಾಗಿ ಎಂಬ ಭಾವನೆ ಆಗ ಅತಿಯಾಗಿರಲಿಲ್ಲ. ಸಂಪಾದನೆ ಅವರಿಗೆ ಬೇಕಾಗಿರಲಿಲ್ಲವೆಂದಲ್ಲ. ಅವರೂ ಬಡವರೇ. ಆದರೆ ತಾಟಾ ಪೋಟಿಯ ಕೆಲಸವನ್ನು ಅವರು ಅಭ್ಯಾಸ ಮಾಡಿ ಕೊಂಡಿರಲಿಲ್ಲ. ಅಡ್ಡಕಸಬಿ ಬದುಕಿಗೆ ಅವರ ಮನಸೊಪ್ಪದು. ದುಡಿಮೆಯಿಲ್ಲದ ಅನ್ನ ಮೈ ಹತ್ತದೆಂದು ಅಂದಿನವರ ನಂಬಿಕೆ. ಪ್ರಕೃತಿ ಹೇಗೆ ಕೆಲಸ ಮಾಡುತ್ತದೆಯೋ ಹಾಗೆ ತಾವೂ ಕೈಗೆಬಂದ ಕೆಲಸವನ್ನು ಸಾಧ್ಯವಾದಷ್ಟು ಸೊಗಸಾಗಿ ಮಾಡಬೇಕೆಂಬುದು ಅವರ ನಿಯಮ. ಅವಸರವಸರವಾಗಿ, ಹೇಗೆಂದರೆ ಹಾಗೆ, ಕೆಲಸದ ನಟನೆ ಮಾಡಿ, ಆದಷ್ಟು ಕಡಮೆ ದುಡಿತಕ್ಕೆ ಆದಷ್ಟು ಹೆಚ್ಚು ಕೂಲಿ ಗಿಟ್ಟಸಿಕೊಳ್ಳುವ ಯೋಚನೆ ಆಗ ಬಂದಿರಲಿಲ್ಲ. ಈಚೆಗೆ ಹೊಸ ಹೊಸ ವ್ಯಾಪಾರಗಳೂ, ಹೊಸ ಹೊಸ ಕಸಬುಗಳೂ ಬಂದು ಉಪಾಯ ಜೀವನದ ಆಶೆ ಹರಡುತ್ತಿದೆ. ಪಟ್ಟಣದ ರೀತಿಗಳೂ ಡಾಂಭಿಕತೆಯೂ ಪ್ರಕಟನ ಸೌಲಭ್ಯವೂ ಪ್ರಾಮಾಣಿಕತೆಗೆ ಬಲ ತಪ್ಪಿಸಿ ಚಮತ್ಕಾರ ಚತುರೋಪಾಯಗಳಿಗೆ ಪ್ರೋತ್ಸಾಹ ಕೊಡುತ್ತಿದೆ. ಸಮಾಜಕ್ಕೆ ಕೆಲಸಗಾರತನದ ಹೆಮ್ಮೆ ನಷ್ಟವಾಗುವುದಕ್ಕಿಂತ ದೊಡ್ಡ ನಷ್ಟ ಇರಲಾರದು.

ಐವತ್ತು ವರ್ಷಗಳ ಹಿಂದೆ ಮೂವರು ನಾಲ್ವರು ಅಣ್ಣ ತಮ್ಮಂದಿರುಗಳೂ ಅವರ ಮಕ್ಕಳೂ ಮೊಮ್ಮಕ್ಕಳೂ ಅವರ ಅಕ್ಕತಂಗಿಯರಲ್ಲಿಯೂ, ಅತ್ತಿಗೆ ನಾದನಿಯರಲ್ಲಿಯೂ ಮನೆತಪ್ಪಿದವರೂ ಅವರ ಮಕ್ಕಳೂ ಸೇರಿ ಇಪ್ಪತ್ತು – ಇಪ್ಪತ್ತೈದು ಮಂದಿ ಒಟ್ಟಗಿದ್ದ ಕುಟುಂಬಗಳು ಅಪರೂಪವಾಗಿರಲಿಲ್ಲ. ನೂರಕ್ಕಿಂತ ಹೆಚ್ಚು ಮಂದಿಯಿದ್ದ ಕುಟುಂಬಗಳನ್ನು ನಾನು ನೋಡಿದ್ದೇನೆ. ಆ

## ಭಾಗ ಎ

1. ಈ ಕೆಳಗಿನ ಯಾವುದಾದರೂ ಒಂದರ ಬಗ್ಗೆ ಸುಮಾರು 300 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ : 25

(ಅ) ನಶಿಸಿ ಹೋಗುತ್ತಿರುವ ನಾಡಿನ ಕಲೆಗಳ ಪುನರುಜ್ಜೀವನ

(ಆ) ನೆಲ ಕಚ್ಚಿದ ಬಡಜನಾಂಗದ ಆಶೋತ್ತರಗಳಿಗೆ ಸೂಕ್ತ ಕಾರ್ಯ ಯೋಜನೆಗಳು

(ಇ) ದೇಶದ ಐಕ್ಯತೆಗೆ ರಾಷ್ಟ್ರೀಯ ಹಬ್ಬಗಳ ಆಚರಣೆ, ಕಡ್ಡಾಯ

(ಈ) ಸಮಷ್ಠಿ ಕುಟುಂಬಗಳು ಅಂದು – ಇಂದು

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ : 25

ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯ ವಿನಯಗಳ ಸೊಬಗು, – ಸ್ವಗುಣ ಪರಗುಣಗಳ ಸಂಮಿಶ್ರಿತ ಕಾಂತಿ. ಈ ಸಂಸ್ಕೃತಿ ಮೂಲದಲ್ಲಿ ನಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು. ಆದು ನಮ್ಮ ಒಳ ಸಂಪತ್ತು. ಆದರ ಜಾಗ ಮನಸ್ಸು ಮತ್ತು ಹೃದಯ. ಅದರಿಂದ ಬೇರೆ ಯಾದದ್ದು ನಮ್ಮ ಬಹಿರಂಗ ಜೀವನ. ಇದರಲ್ಲಿ ಮನೆ, ವಾಹನ, ಒಡವೆ, ಹಣ ಮೊದಲಾದ ಘನವಸ್ತುಗಳು ಸೇರಿವೆ. ಕಳೆದ ಐವತ್ತು ವರ್ಷಗಳಲ್ಲಿ ಈ ಹೊರ ಸೌಕರ್ಯಗಳ ವಿಚಾರದಲ್ಲಿ ನಮ್ಮ ದೇಶ ಬಹುಮಟ್ಟಿಗೆಮುಂದುವರಿದಿದೆ. ಹಿಂದೆ ಮೋಟಾರುಗಳೂ, ವಾಯುವಿಮಾನಗಳೂ ಈಗಿನಂತೆ ಇರಲಿಲ್ಲ. ಈಗಿನಷ್ಟು ವಿದ್ಯಾಶಾಲೆಗಳೂ, ವೈದ್ಯಶಾಲೆಗಳೂ, ರೈಲುಗಳೂ, ಬ್ಯಾಂಕುಗಳೂ, ಕಾರ್ಖಾನೆಗಳೂ, ವ್ಯಾಪಾರ ವಿಸ್ತಾರವೂ ಆಗ ಇರಲಿಲ್ಲ. ಈ ಬಾಹ್ಯ ಸಂಪತ್ತಿನಲ್ಲಿ ನಾವು ಅಭಿವೃದ್ಧಿ ಕಂಡಿದ್ದೇವೆ. ಆದರೆ ಅಂತರಂಗ ಸಂಪತ್ತಿನಲ್ಲಿ ಹಾಗೆ ಬೆಳೆದಿಲ್ಲ, ಇನ್ನೂ ಬಡವಾಗಿದ್ದೇವೆ ಎಂದೇ ನನ್ನ ಎಣಿಕೆ. ಈ ಬಡತನವನ್ನು ಐದಾರು ಪ್ರಸ್ತಾವಗಳ ಮೂಲಕ ನಿದರ್ಶನ ಪಡಿಸಬೇಕೆಂಬುದು ನನ್ನ ಈಗಿನ ಉದ್ದೇಶ. ಮೊದಲು ಮನುಷ್ಯನಿದ್ದ ಸ್ಥಾನಕ್ಕೆ ಯಂತ್ರ ಬರುತ್ತಿದೆ. ಹೃದಯದ ಕಾರ್ಯಗಳನ್ನು ಯಂತ್ರಗಳ ಮೂಲಕ ನಿರ್ವಾಹಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಐವತ್ತು ವರ್ಷಗಳ ಹಿಂದೆ ಮದುವೆಗೆ ಕರೆಯೋಲೆ ಕೈಬರಹದಲ್ಲಿರುತ್ತಿತ್ತು, ಈಗ ಅಚ್ಚಿನಲ್ಲಿದೆ. ಕೈಯಿಂದ ಬರೆಯುವಾಗ ಮನಸ್ಸು ಉದ್ದೇಶದಲ್ಲಿರುವಾತನ ಯೋಗ್ಯತೆಯನ್ನು, ಆತನಿಗೆ ಸಲ್ಲಬೇಕಾದ ಪ್ರೀತಿ ಗೌರವಗಳನ್ನು ನೆನೆದುಕೊಳ್ಳುತ್ತಿತ್ತು. ಆದು ಹೃದಯಸ್ಪರ್ಶ, ಇಂಗ್ಲೀಷಿನಲ್ಲಿ ಹೇಳುವಂತೆ personal touch-ಸಾಕ್ಷಾತ್ತಿನ ಕಲ್ಪನೆ, ಈಗ ಅದೂ ಆಷ್ಟಾಗಿರದು. ಈಗಿನದು ಆಚ್ಚಿನ ಆಹ್ವಾನ, ನ್ಯೂಸ್ ಪೇಪರಿನಂತೆ ಸಾವಿರ ಮಂದಿಗೆ ಹೋಗುತ್ತದೆ. ಅದಕ್ಕೆ ತಾರತಮ್ಯ ವಿಚಾರ ಬೇಕಿಲ್ಲ. ಹಿಂದೆ ಮನೆಗೆ ಇಷ್ಟರು ಬಂದರೆ ಅವರಿಗೆ ಫಲಾಹಾರಕ್ಕಾಗಿ ಮನೆಯಲ್ಲಿ ಮಾಡಿದ್ದ ತಿಂಡಿಯನ್ನು ಮುಂದಿರಿಸುತ್ತಿದ್ದರು. ಈಗ ಹೋಟಲಿನ ಸಾಮಾನನ್ನು ತರಿಸುತ್ತೇವೆ ಅಥವಾ ಹೋಟಲಿಗೇ ಅವರನ್ನು ಸಾಗಿಸಿಕೊಂಡು ಹೋಗುತ್ತೇವೆ. ಹೊಟೆಲು

AA

# 2010

## ಕನ್ನಡ

## (ಕಡ್ಡಾಯ)

ಸಮಯ : 3 ಗಂಟೆ ] [ಗರಿಷ್ಠ ಅಂಕಗಳು : 150

### ಸೂಚನೆಗಳು

(1) ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.

(2) ಪ್ರತಿ ಪ್ರಶ್ನೆಗೆ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.

(3) ನಿರ್ದಿಷ್ಟವಾಗಿ ಸೂಚಿಸದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.

(4) ಭಾಗ ಎ ಪ್ರಶ್ನೆ ಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.

(5) ಭಾಗ ಎ ಪ್ರಶ್ನೆ ಸಂಖ್ಯೆ 3 ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.

(6) ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು/ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲಿ ಮಾಡಕೂಡದು.

SEAL

**Note :** The English version of the instructions is printed on the back cover of this question paper.

[Turn over